**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ**

**ಜೆ.ಎಂ.ಎಫ್.ಸಿ., ನ್ಯಾಯಾಲಯ, ಹಾವೇರಿ.**

**ಎಂ ವಿ ಸಿ 1324/2024**

ಆರ್. ಡಬ್ಲ್ಯೂ-1

| | | |
|---|---|---|
| ಹೆಸರು | : | ಡಾಃ ಅನಿರುದ್ಧ. ಎಂ.ಡಿ. |
| ತಂದೆಯ ಹೆಸರು | : | ಧನಂಜಯಾಚಾರ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿಗಳು, ಚನ್ನಗಿರಿ ಸಾರ್ವಜನಿಕ ತಾಲ್ಲೂಕ ಆಸ್ಪತ್ರೆ |
| ವಾಸಸ್ಥಳ | : | ದಾವಣಗೆರೆ. |

**ದಿನಾಂಕಃ 07-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಎಂ.ಜಿ.ಎಂ., 2 ನೇ ಎದುರುದಾರರ ಪರ ವಕೀಲರಿಂದಃ**

ಅರ್ಜಿದಾರರಿಗೆ ಸಂಬಂಧಪಟ್ಟ ಎಂ ಎಲ್ ಸಿ ರಜಿಸ್ಟರ ಮತ್ತು ಪೋಲಿಸರಿಗೆ ನೀಡಿದಂತಹ ಮಾಹಿತಿಯ ಬಗ್ಗೆ ಎರಡು ದೃಢೀಕೃತ ದಾಖಲೆಗಳನ್ನು ಹಾಜರುಪಡಿಸಿದ್ದು (ಸದರಿ ಪ್ರತಿಗಳ ಮೂಲ ಎರಡು ರಜಿಸ್ಟರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪ್ರತಿಗಳೊಂದಿಗೆ ತಾಳೆ ನೋಡಿ, ಸರಿ ಇದೆ ಎಂದು ಕಂಡು ಬಂದಿದ್ದರಿಂದ ಮೂಲ ರಜಿಸ್ಟರಗಳನ್ನು ಹಿಂದಿರುಗಿಸಲಾಯಿತು) ಸದರಿ ದೃಢೀಕೃತ ದಾಖಲೆಗಳನ್ನು ನಿಆರ್-1 ಮತ್ತು ನಿಆರ್-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಬಿ.ಸಿ.ಕೆ. ಅರ್ಜಿದಾರರ ಪರ ವಕೀಲರಿಂದಃ**

ದಿನಾಂಕಃ 19-03-2024 ರಂದು ನಾನು ಚನ್ನಗಿರಿ ತಾಲ್ಲೂಕ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಆ ದಿನ ಹುಸೇನಶರೀಫ್ ತಂದೆ ಅಹ್ಮದಶರೀಫ್ ಎನ್ನುವವರು ರಸ್ತೆ ಅಫಘಾತದಲ್ಲಿ

ಆರ್ ಡಬ್ಲ್ಯೂ-1

ಗಾಯಗೊಂಡು ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು ಎಂದರೆ ಸರಿ. ಸದರಿಯವರನ್ನು ನಾನು ಬೆಳಿಗ್ಗೆ 9-30 ಕ್ಕೆ ಪರೀಕ್ಷೆ ಮಾಡಿರುತ್ತೇನೆ. ನಿಆರ್-1 ನ್ನು ನಾನೇ ನೀಡಿರುತ್ತೇನೆ ಎಂದರೆ ಸರಿ. ಆ ದಿನ ನಾನು ಆತನಿಗೆ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ರೇಪರ್ ಮಾಡಿರುತ್ತೇನೆ ಎಂದರೆ ಸರಿ. ಆತನು ಶಿವಮೊಗ್ಗ ಮ್ಯಾಕ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಡಿಸ್ಚಾರ್ಜ ಸಮರಿಯನ್ನು ಹಾಜರು ಪಡಿಸಿದ ಮೇರೆಗೆ ನಾನು ನಿಆರ್-1 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ - ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.